ಇನ್‌ಸ್ಪೆಕ್ಟರ್ ನಾಗೇಶ್ ದಂಗಾದ. ಸತ್ತಿರುವವನು ಕೋಟ್ಯಧಿಪತಿ, ಸರಿಯೇ. ಆದರೆ ಕೇವಲ ಚೆಸ್ ಆಟದಲ್ಲಿ ಸೋತಿದ್ದಕ್ಕೆ ಐದು ಕೋಟಿ! ನಂಬಲು ಅಸಾಧ್ಯ!

'ನಂತರ ಆ ಮೂಲೆಯಲ್ಲಿದ್ದ ಡ್ರಾವರ್‌ನಲ್ಲಿ ನನ್ನ ಪಿಸ್ತೂಲ್ ಇದೆ ಕೊಡು ಅಂದರು. ಭಯ ಪಡಬೇಡ ಲೋಡ್ ಆಗಿಲ್ಲ ಎಂದು ಹೇಳಿದ ಮೇಲೆಯೇ ನಾನು ಅದನ್ನು ತಂದು ಕೊಟ್ಟೆ. ನನ್ನೊಂದಿಗೆ ಅದು ಇದು ಮಾತಾಡುತ್ತಾ... ಒಮ್ಮೆಲೇ ತಮ್ಮ ಕಿವಿಯ ಬಳಿ ಗನ್ ಇಟ್ಟುಕೊಂಡು, ನಾನು ಜೀವನದಲ್ಲಿ ಎಂದೂ ಸೋತಿರಲಿಲ್ಲ, ಇಂದು ಸೋತೆ. ಹಾಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ಎಂದು ಗುಂಡು ಹೊಡೆದುಕೊಂಡು ಸತ್ತರು... ಸ್ವಲ್ಪ ಹೊತ್ತು ಭಯದಿಂದ ಏನೂ ಮಾಡದಂತಾಗಿ ಅಲ್ಲಿಯೇ ನಿಂತಿದ್ದೆ. ನಂತರ ಭಯ ಆಗಿ ಇಲ್ಲಿಂದ ಓಡಲು ಹೋದಾಗ ನೀವು ಬಂದಿರಿ... ಇಷ್ಟೇ ಆಗಿದ್ದು ಸರ್.'

ನಾಗೇಶ್, ತನ್ನೊಡನೆ ಬಂದಿದ್ದ ಫೋರೆನ್ಸಿಕ್‌ನವನ ಕಡೆ ತಿರುಗಿ, 'ಆ ಗನ್ ಚೆಕ್ ಮಾಡಿ' ಎಂದ. ಅವನು ಈ ಮಾತು ಕೇಳುತ್ತಾನೆ ಎಂದು ಮೊದಲೇ ತಿಳಿದಿದ್ದ ಅವನು, 'ಸರ್, ಎರಡು ಗುಂಡು ಹಾರಿದೆ. ಉಳಿದಿದ್ದು ಇಲ್ಲಿಯೇ ಇದೆ. ಮಾರ್ಕ್ ನೋಡಿದರೆ ಇವತ್ತೇ ಹಾರಿಸಿರುವ ಹಾಗಿದೆ' ಎಂದ.

ಅವನ ಮಾತು ಕೇಳಿ ರಾಕೇಶ್ ದಂಗಾದ. ಅವನಿಗೆ ಗೊತ್ತಿತ್ತು, ಹಾರಿದ್ದು ಒಂದೇ ಗುಂಡು... ಅದೂ ಕೃಷ್ಣನ್‌ನ ತಲೆ ಸೀಳಿ ಹೋಗಿದ್ದು... ಎರಡನೆಯದು ಎಂದರೆ... ಆ ಪಿಸ್ತೂಲ್ ಮೇಲೆ ನನ್ನ ಬೆರಳಚ್ಚು ಕೂಡಾ ಇದೆ!

'ಸರ್, ನಾನು ನಿಜ ಹೇಳ್ತಾ ಇದ್ದೀನಿ... ಹಾರಿದ್ದು ಒಂದೇ ಗುಂಡು... ಅವರು ನನ್ನೆದುರಿಗೇ ಲೋಡ್ ಮಾಡಿದ್ದರು...' ರಾಕೇಶ್ ಕೂಗಿದ.

'ಇನ್ನೊಂದು ಬುಲೆಟ್ ಸಿಗುವವರೆಗೂ ಮಾತಾಡಿ... ಆಮೇಲೆ ನಿಮ್ಮನ್ನು ಅರೆಸ್ಟ್ ಮಾಡಬೇಕಾಗುತ್ತದೆ' ನಾಗೇಶನ ಮಾತುಗಳು ಮುಗಿಯುವಷ್ಟರಲ್ಲಿ ಸುಮಾರು ಮುವತ್ತು ವರ್ಷದವಳು ಎಲ್ಲರನ್ನೂ ತಳ್ಳುತ್ತಾ... 'ಕೃಷ್ಣನ್... ಕೃಷ್ಣನ್...' ಎಂದು ಕೂಗುತ್ತಾ ಒಳಗೆ ಓಡಿ ಬಂದಳು. ಅವಳು ನೂಕಿದ ರಭಸಕ್ಕೆ, ಒಂದಿಬ್ಬರು ಕೆಳಗೆ ಬಿದ್ದರು. ಎದುರಿಗೆ ಕಂಡ ಆ ಬೀಭತ್ಸ ದೃಶ್ಯ ಕಂಡು ನೋಡಲಾರದೇ ಕುಸಿದು ಬಿದ್ದಳು.

'ಸರ್, ಇವರೇ ಕೃಷ್ಣನ್ ಅವರ ಪತ್ನಿ' ನಿಧಾನವಾಗಿ ನುಡಿದ ರಾಕೇಶ್.

ಇಂಥಾ ಅತಿಶಯ ಸುಂದರಿ... ಈ ವಯಸ್ಸಾದವನನ್ನು ಮದುವೆ ಆಗಿದ್ದಾಳಾ? ಪ್ರೀತಿ, ಹಣ ಎರಡರಲ್ಲಿ ಏನಾದರೂ ಇರಬಹುದು ಎಂದುಕೊಂಡ ನಾಗೇಶ್.

'ಏನಾಯಿತು, ಹೇಗಾಯಿತು ಸರ್?' ಪ್ರಶ್ನಿಸಿದಳು.

'ಇಲ್ಲಿ ಒಂದು ಅಸಹಜ ಸಾವು ಆಗಿದೆ ಅಂತಾ ಫೋನ್ ಬಂದಿತ್ತು. ನಾವು ಬಂದಾಗ ಈ ವ್ಯಕ್ತಿ ಇಲ್ಲಿಂದ ಓಡಿ ಹೋಗಲು ಪ್ರಯತ್ನಿಸುತ್ತಿದ್ದು, ನಮ್ಮ ಕೈಗೆ ಸಿಕ್ಕಿ ಹಾಕಿಕೊಂಡ. ಕೇಳಿದರೆ ನಿಮ್ಮ ಪತಿ ಕರೆಸಿದ್ದಾರೆಂದೂ, ಅದೂ ಅಲ್ಲದೆ ಅವರು, ಇವನೊಂದಿಗೆ ಚೆಸ್ ಆಟದಲ್ಲಿ ಸೋತಿದ್ದರಿಂದ ಇವರಿಗೆ ಐದು ಕೋಟಿ ಹಣ ನೀಡಿ ಅದೇ ಬೇಜಾರಿನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಿದ್ದಾನೆ' ಎಂದ ನಾಗೇಶ್.

'ಚೆಸ್ ಆಟದಲ್ಲಿ ಅವರು ಸೋಲುವುದಾ? ಸಾಧ್ಯವೇ ಇಲ್ಲ, ಅವರು ಚೆಸ್‌ನಲ್ಲಿ ಅಂತರರಾಷ್ಟ್ರೀಯ ಮಟ್ಟದ ಆಟಗಾರ...'

ಎಲ್ಲರ ಗಮನ ರಾಕೇಶನ ಕಡೆ ತಿರುಗಿತು. ಅವನೇ ಹೇಳಿದಂತೆ ಚೆಸ್ ಅಷ್ಟಾಗಿ ಬರದವನು